C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 17.08.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:1 ಪಿ. ಡಬ್ಲ್ಯೂ:2

| | |
|---|---|
| ಸಾಕ್ಷಿದಾರರ ಹೆಸರು | ಬೋರೆಗೌಡ |
| ತಂದೆಯ ಹೆಸರು | ಬಸವೇಗೌಡ |
| ವಯಸ್ಸು | 70 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕೃಷ್ಣಪುರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಮತ್ತು 3 ನನ್ನ ದೂರದ ಸಂಬಂಧಿಗಳಾಗಿರುತ್ತಾರೆ. ಚಾಸಾ.2 ಕೃಷ್ಣಾಪುರದಲ್ಲಿ ವಾಸ ಇದ್ದಾರೆ. ಆರೋಪಿ ಗೊತ್ತು. ಆರೋಪಿ ಆಗಾಗ ಬಂದು ಹೋಗುತ್ತಿದ್ದರು. ಆರೋಪಿ ಬೆಂಗಳೂರಿನವರು. ಆರೋಪಿ ಚಾಸಾ.2 ರವರ ಅಣ್ಣನ ಮಗ. ಕೃಷ್ಣಾ ಪುರದ ತೋಟದಲ್ಲಿ ಕಾಯಿಗಳನ್ನು ಕಿತ್ತುಕೊಂಡು ಹೋಗುವುದಕ್ಕೆ ಆರೋಪಿ ಆಗಾಗ ಬಂದು ಹೋಗುತ್ತಿರುತ್ತಾರೆ. ಈಗ ನನಗೆ ತೋರಿಸಿದ ದೂರಿನಲ್ಲಿರುವ ಸಹಿ ನನ್ನ ದಾಗಿದ್ದು , ದೂರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎಂದು ಗುರುತಿಸಲಾಯಿತು. ದಿನಾಂಕ 04.06.2020 ರಂದು ರಾತ್ರಿ 10.30 ಗಂಟೆಯಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದಾಗ , ಆರೋಪಿ ಬಂದು , "ನಾನು ಕಾಯಿ ಕಿತ್ತುಕೊಳ್ಳುವುದಕ್ಕೆ ಹೋದೆ , ಆಗ ಚಾಸಾ.2 ಕಾಯಿ ಕಿತ್ತುಕೊಂಡು ನನಗೆ ಕೊಡಲಿಲ್ಲ, ಆದ್ದರಿಂದ ಚಾಸಾ.2 ರವರಿಗೆ ಒಂದು ಗತಿ ಕಾಣಿಸುತ್ತೇನೆ ಅಂತ ಹೇಳಿದನು ". ಆಗ ಆರೋಪಿಯ ಕೈಯಲ್ಲಿ ಒಂದು ಉದ್ದ ಕುಡುಗೋಲು ಇತ್ತು. ಆಗ ನಾನು ಆರೋಪಿಗೆ ಬೆಳಗ್ಗೆ ಮಾತನಾಡೋಣ ಈಗ ಹೋಗು ಅಂತ ಹೇಳಿದೆನು. ರಾತ್ರಿ 11.00 ಗಂಟೆಯಲ್ಲಿ ಚಾಸಾ.2 ನಮ್ಮ ಮನೆಗೆ ಬಂದು ಅಣ್ಣ ಅಣ್ಣ ಎಂದು ಕೂಗಿಕೊಂಡನು. ಬಾಗಿಲು ತೆಗೆದು ನೋಡಿದಾಗ ಚಾಸಾ.2 ರವರ ಬಲಗೈಯಿಂದ

ರಕ್ತ ಬರುತ್ತಿತ್ತು ಹಾಗೂ ಬಲಗೈ ಮುಂಭಾಗದಲ್ಲಿ ಪೆಟ್ಟಾಗಿತ್ತು. ಚಾಸಾ.2 ರವರಿಗೆ ವಿಚಾರಿಸಿದಾಗ, ಆರೋಪಿ ಕೈಗೆ ಹಲ್ಲೆ ಮಾಡಿದ ಎಂದು ಹೇಳಿದನು. ಚಾಸಾ.2 ರವರು ವಾಸ ಇದ್ದ ಬಾಡಿಗೆ ಮನೆಯ ಮುಂಭಾಗದಲ್ಲಿ ಆರೋಪಿ ಚಾಸಾ.2 ರವರಿಗೆ ಹಲ್ಲೆ ಮಾಡಿದ್ದಾಗಿ ಹೇಳಿದನು.

ದಿನಾಂಕ 04.06.2020 ರಂದು ಆರೋಪಿ ಚಾಸಾ.2 ರವರಿಗೆ ಹಲ್ಲೆ ಮಾಡಿದನು. ಆಂಬ್ಯೂಲೆನ್ಸ್ ಅನ್ನು ಕರೆಸಿ ಚಾಸಾ.2 ರವರನ್ನು ಚಾಸಾ.8, 9 ರವರೊಂದಿಗೆ ಚುಂಚನಗಿರಿ ಆಸ್ಪತ್ರೆಗೆ ಕಳುಹಿಸಿದೆವು. ನಂತರ ಅಲ್ಲಿಂದ ಬೆಂಗಳೂರಿನ ಲಕ್ಷ್ಮಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಘಟನೆಯಾದ ಮಾರನೆಯ ದಿವಸ ಬೆಳಗ್ಗೆ 10.00 ಗಂಟೆಗೆ ದೂರನ್ನು ನಿಪಿ.2 ರಂತೆ ನೀಡಿದೆನು. ಆರೋಪಿಯು ನಮ್ಮ ಮನೆಗೆ ಬಂದಾಗ ಆತನ ಕೈಯಲ್ಲಿ ಇದ್ದ ಕುಡುಗೋಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕುಡುಗೋಲನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.3 ಅಂತ ಗುರುತಿಸಲಾಯಿತು. ಚಾಸಾ.2 ರವರ ಮನೆಯ ಬಾಗಿಲಲ್ಲಿ ಮು.ಮಾ.3 ಕುಡುಗೋಲನ್ನು ಬಿಸಾಡಿ ಆರೋಪಿ ಹೊರಟು ಹೋಗಿದ್ದನು. ನಾನು ನಿಪಿ.2 ದೂರನ್ನು ನೀಡಿದ ಮೇಲೆ ಪೊಲೀಸರು ಜಾಗಕ್ಕೆ ಬಂದಿದ್ದಾಗ ಮು.ಮಾ.3 ಕುಡುಗೋಲನ್ನು ನೋಡಿದೆನು. ಪೊಲೀಸರು ಕುಡಗೋಲನ್ನು ಅಮಾನತು ಪಡಿಸಿಕೊಂಡರು. ಪೊಲೀಸರು ಸ್ಥಳದಲ್ಲಿ ಇದ್ದ ಸಾದಾ ಮಣ್ಣು ಮತ್ತು ರಕ್ತದ ಕಲೆ ಇರುವ ಮಣ್ಣನ್ನು ತೆಗೆದುಕೊಂಡರು, ಚಾಸಾ.2 ಗಲಾಟೆಯ ವೇಳೆಯಲ್ಲಿ ಹಾಕಿಕೊಂಡಿದ್ದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಟ್ಟೆಯನ್ನು ನಾನೇ ಆಸ್ಪತ್ರೆಯಿಂದ ಬಿಚ್ಚಿ ಪೊಲೀಸರಿಗೆ ತಂದು ಕೊಟ್ಟಿದ್ದೆನು. ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾಗ ಚಾಸಾ.4, 5 ಹಾಗೂ ನಾನು ಇದ್ದೆವು , ಪೊಲೀಸರು ಜಾಗಕ್ಕೆ ಬಂದಿದ್ದಾಗ ಸಮಯ ಬೆಳಗ್ಗೆ 11.00 ಗಂಟೆ ಆಗಿತ್ತು. ಪೊಲೀಸರು ಅಮಾನತು ಪಡಿಸಿಕೊಂಡಿದ್ದ ಮಣ್ಣನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸಾದಾ ಮಣ್ಣನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 4 ಎಂದು ಗುರುತಿಸಲಾಯಿತು. ಸಾಕ್ಷಿಯು ರಕ್ತ ಸಿಕ್ತ ಮಣ್ಣನ್ನು ನೋಡಿ ಅದನ್ನು ಮು.ಮಾ. 5 ಎಂದು ಗುರುತಿಸಲಾಯಿತು. ಚಾಸಾ.2 ರವರ ಬಟ್ಟೆಗಳನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು ಮು.ಮಾ.2 ಎಂದು ಗುರುತಿಸಲಾಗಿದೆ. ಸ್ಥಳ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಅದರಲ್ಲಿ ನನ್ನ ಸಹಿ ಇದೆ. ಸ್ಥಳ ಮಹಜರನ್ನು ನಿಪಿ.3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ, 3 ಫೋಟೋಗಳಲ್ಲಿ ಚಾಸಾ.2 ರವರ ಮನಯ ಮುಂಭಾಗದ ಜಾಗ ಇದೆ. ಈ ಫೋಟೋಗಳಲ್ಲಿ ನಾನು, ಚಾಸಾ.4 (ಶರತ್), ಚಾಸಾ.5 (ಮಧು) ಹಾಗೂ ಪೊಲೀಸರು ಇದ್ದಾರೆ. ಮತ್ತು ಇನ್ನೊಂದು ಫೋಟೋದಲ್ಲಿ ರಕ್ತ ಸಿಕ್ತ

ಟ್ಟಿ ಇದೆ. ಸದರಿ 4 ಫೋಟೋಗಳನ್ನು ನಿಪಿ.4 ರಿಂದ ನಿಪಿ.7 ಎಂದು ಗುರುತಿಸಲಾಯಿತು. ಘಟನೆ ನಡೆದು 5 ದಿವಸಗಳು ಆದ ಮೇಲೆ ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದಿದ್ದಾಗ ತೆಗೆಸಿದ್ದ 2 ಫೋಟೋಗಳನ್ನು ಈಗ ನೋಡುತ್ತಿದ್ದು ಅದರಲ್ಲಿ ನಾನು, ಆರೋಪಿ , ಪೊಲೀಸರು ಮತ್ತು ಬೇರೆ ಸಾಕ್ಷಿಗಳು ಇದ್ದಾರೆ . ಸದರಿ 2 ಫೋಟೋಗಳನ್ನು ನಿಪಿ.8 ಮತ್ತು ಪಿ.9 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಜಾಗವು ಚಾಸಾ.2 ರವರ ಬಾಡಿಗೆ ಮನೆಯ ಮುಂಭಾಗದ ಜಾಗ ಆಗಿರುತ್ತದೆ. ಆರೋಪಿಯು ಸದರಿ ಜಾಗವನ್ನು ಪೊಲೀಸರಿಗೆ ತೋರಿಸಿದನು. ಪೊಲೀಸರು ಸ್ಥಳದಲ್ಲಿ ಮಹಜರನ್ನು ಮಾಡಿಕೊಂಡರು. ಮಹಜರ್ ಗೆ ನಾನು ಚಾಸಾ.4 ಹಾಗೂ ಚಾಸಾ.5 ಸಹಿ ಮಾಡಿದ್ದೇವೆ. ಈಗ ತೋರಿಸಿದ ಇನ್ನೊಂದು ಸ್ಥಳ ಪಂಚನಾಮೆಯನ್ನು ನೋಡಿದ್ದು , ಅದರಲ್ಲಿ ನನ್ನ ರುಜು ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ.10 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯವನ್ನು ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕಃ 14.09.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ , ಪ್ರಮಾಣ ವಚನ ಬೋಧಿಸಲಾಗಿದೆ

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎಂ. ವಕೀಲರಿಂದಃ

ನಾನು 4 ನೇ ಕ್ಲಾಸ್ ವರೆಗೆ ಓದಿದ್ದೇನೆ. ನನಗೆ 3 ಜನ ಗಂಡು ಮಕ್ಕಳು. ಒಬ್ಬ ಮಗ ಬೆಂಗಳೂರಿನಲ್ಲಿ ಇದ್ದಾರೆ. ಇನ್ನೊಬ್ಬರು ಮೈಸೂರಿನಲ್ಲಿ ಇದ್ದಾರೆ ಮತ್ತು ಇನ್ನೊಬ್ಬರು ಕೃಷ್ಣಾಪುರದಲ್ಲಿ

ಇದ್ದಾರೆ. ನಾನು 3 ಜನ ಮಕ್ಕಳಿಗೂ ಮದುವೆ ಮಾಡಿದ್ದೇನೆ. ನನ್ನ 3 ಜನ ಮಕ್ಕಳಿಗೆ ಆಸ್ತಿಯಲ್ಲಿ ಭಾಗ ಕೊಟ್ಟಿಲ್ಲ. ಮೃತ ರಾಮೇಗೌಡರಿಗೆ 3 ಜನ ಮಕ್ಕಳು. ಇವರ ಪೈಕಿ ಗೋಪಿ ಮತ್ತು ವಿಶ್ವನಾಥ್ ಇಬ್ಬರು ಬೆಂಗಳೂರಿನಲ್ಲಿ ವಾಸ ಇದ್ದಾರೆ . ಇನ್ನೊಬ್ಬ ಮಗ ಸತೀಶ ಕೃಷ್ಣಾಪುರ ಊರಿನಲ್ಲಿ ವಾಸ ಇದ್ದಾರೆ. ಆರೋಪಿಯ ತಂದೆ ಗೋಪಿ ಹಾಗೂ ಆರೋಪಿಯ ಚಿಕ್ಕಪ್ಪ ವಿಶ್ವನಾಥ್ , ಇಬ್ಬರು ಚಾಸಾ.3 ರವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಕೊಡಿ ಅಂತ ಆಗಾಗ ಬಂದು ಕೇಳುತ್ತಿದ್ದರು ಎಂದರೆ ಸಾಕ್ಷಿಯು ಗೋಪಿ ಮಾತ್ರ ಕೇಳುತ್ತಿದ್ದರು , ವಿಶ್ವನಾಥ್ ಅಲ್ಲ ಎಂದು ಹೇಳುತ್ತಾರೆ. ಗೋಪಿ ಮತ್ತು ವಿಶ್ವನಾಥ್ ಭಾಗ ಕೇಳುತ್ತಿದ್ದ ವಿಚಾರವನ್ನು ಚಾಸಾ.3 ನನಗೆ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ನಾನು , ಚಾಸಾ.2 , ಚಾಸಾ.3 ಮತ್ತು ಆರೋಪಿ ತಂದೆಯಾದ ಗೋಪಿ ರವರು ಚರ್ಚೆ ಮಾಡಿ ಆಯಿತು ನೋಡೋಣ ಅಂತ ಹೇಳಿ, ಆರೋಪಿಯ ತಂದೆಯನ್ನು ಕಳುಹಿಸಿಕೊಡುತ್ತಿದ್ದೆವು ಎಂದರೆ ಸರಿಯಲ್ಲ. ಚಾಸಾ.3 ರವರ ಹೆಸರಿನಲ್ಲಿ ಇರುವ ಎಲ್ಲಾ ಆಸ್ತಿಗಳು, ರಾಮೇಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಚಾಸಾ.3 ರವರು ಆಸ್ತಿಯನ್ನು ಯಾರಿಗೂ ಭಾಗ ಮಾಡಿ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಹೇಳುತ್ತಾರೆ, ನಾನು ಸಾಯುವವರೆಗೂ ಯಾರಿ ಆಸ್ತಿಯನ್ನು ಭಾಗ ಮಾಡಿ ಕೊಡುವುದಿಲ್ಲ ಎಂದು ಚಾಸಾ.3 ಹೇಳಿದ್ದಾರೆ ಎಂದು. ಚಾಸಾ.3 ಸದರಿ ಆಸ್ತಿಯನ್ನು ಸೊಸೈಟಿಯಲ್ಲಿ ಒತ್ತೆ ಇಟ್ಟು ಸಾಲವನ್ನು ತೆಗೆದುಕೊಂಡಿರುವ ವಿಚಾರ ನನಗೆ ಗೊತ್ತಿದೆ. ಚಾಸಾ.3 ರವರಿಗೆ ಒಟ್ಟಾರೆ ಇರುವ ಆಸ್ತಿಗಳಾದ 3 ಎಕರೆ 27 ಗುಂಟೆ ಜಮೀನಿನಿಂದ ಬರುತ್ತಿರುವ ಎಲ್ಲಾ ಆದಾಯವನ್ನು ಚಾಸಾ.2 ಮತ್ತು 3 ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿ. ನಿಪಿ.2 ದೂರನ್ನು ನನ್ನ ಕೈಯಿಂದ ನಾನು ಬರೆದಿಲ್ಲ, ಬೇರೆಯವರಿಂದ ಬರೆಸಿದ್ದೇನೆ ಹಾಗೂ ನಾನು ನಿಪಿ.2 ಕ್ಕೆ ಸಹಿ ಮಾಡಿದ್ದೇನೆ. ನಿಪಿ.2 ದೂರನ್ನು ಬರೆದಿದ್ದವರ ಹೆಸರನ್ನು ಪೊಲೀಸರ ಮುಂದೆ ಹೇಳಿದ್ದೇನೆ. ದೂರನ್ನು ಬರೆದವರ ಹೆಸರು ಅಶೋಕ ಬಿನ್ ತಿಮ್ಮಯ್ಯ , ಅವರಿಗೆ 35 ವರ್ಷ ವಯಸ್ಸು. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ.

ನಾನು ಗಲಾಟೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ.2 ದೂರಿನಲ್ಲಿ, ನಾನು ಗಲಾಟೆಯನ್ನು ಕಣ್ಣಾರೆ ನೋಡಿದ್ದೇನೆ ಅಂತ ಬರೆಸಿದ್ದೇನೆ. ದೂರಿನಲ್ಲಿ ನಾನು ಗಲಾಟೆಯನ್ನು ಕಣ್ಣಾರೆ ನೋಡಿದ್ದೇನೆ ಅಂತ ಬರೆಸಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆದಾಗ ನೀವು ಮನೆ ಬಾಗಿಲನ್ನು ಹಾಕಿಕೊಂಡು ಒಳಗಡೆ ಇದ್ದೆ ಎಂದರೆ ಸರಿ. ನಾನು ಮನೆ ಲೈಟನ್ನು ಆರಿಸಿದ್ದೆನು ಎಂದರೆ ಸರಿಯಲ್ಲ. ನಿಪಿ.2 ದೂರಿನಲ್ಲಿ , " ನಾನು ಮನೆಗೆ ಹೋಗಿ ಮಲಗಿದ್ದೆನು ನಂತರ ರಾತ್ರಿ ಸುಮಾರು 11.00 ಗಂಟೆಯಲ್ಲಿ ಯಾರೋ ನಮ್ಮ ಮನಯ ಹತ್ತಿರ ಬಂದು ಕಿಟಕಿಯ ಬಳಿ ಕೂಗುತ್ತಿರುವ ಶಬ್ದ ಕೇಳಿಸಿತು. ನಾನು ಲೈಟ್ ಹಾಕಿ ಹೊರಗೆ ಬಂದು ನೋಡಿದಾಗ ಸತೀಶ ನಮ್ಮ

ಮನೆಯ ಮುಂದೆ ಬಿದಿದ್ದ, ಅವನ ಬಲಗೈ ಕತ್ತರಿಸಿ ರಕ್ತ ಸುರಿಯುತ್ತಿತ್ತು" ಅಂತ ಬರೆಸಿದ್ದೇನೆ. ನಾನು ಮನೆಗೆ ಹೋಗಿ ಮಲಗಿಕೊಂಡಿದ್ದರಿಂದ , ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರಲಿಲ್ಲ ಎಂದರೆ ಸರಿಯಲ್ಲ, ಸುಳ್ಳು. ನಾನು ಘಟನೆಯನ್ನು ಕಣ್ಣಾರೆ ನೋಡದೆ ಇದ್ದರೂ ಸಹಾ ಚಾಸಾ.2 ಮತ್ತು 3 ರವರೊಂದಿಗೆ ಶರೀಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಿಯ ಮಗನಾಗದ ಆರೋಪಿಯು ಬೆಂಗಳೂರಿನಿಂದ ಆಗಾಗ ಊರಿಗೆ ಬಂದು ತೆಂಗಿನ ಕಾಯಿಗಳನ್ನು ಕಿತ್ತುಕೊಂಡು ಹೋಗುತ್ತಿದ್ದ , ಈ ವಿಚಾರದಲ್ಲಿ ಸತೀಶ ಮತ್ತು ಆರೋಪಿಗೆ ಮಾತುಕತೆ ನಡೆದಿದ್ದ ವಿಚಾರವು, ಸದರಿ ಪ್ರಕರಣದ ಘಟನೆ ನಡೆದ ದಿವಸವಾಗಿರುತ್ತದೆ. ಘಟನೆ ನಡೆದ ದಿವಸ ಮದ್ಯಾಹ್ನ ತೋಟದ ಹತ್ತಿರ ಗಲಾಟೆ ಆಗಿತ್ತು ಎಂಬ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ. ಚಾಸಾ.2 ರವರು ಕೃಷ್ಣಾಪುರ ಊರಿನಲ್ಲಿ ವಾಸ ಇದ್ದಾರೆ, ಅವರ ತಾಯಿ ಚಾಸಾ.3 ಬೆಂಗಳೂರಿನಲ್ಲಿ ವಾಸ ಇದ್ದಾರೆ. ಗಲಾಟೆ ನಡೆಯುವಾಗ ಸ್ಥಳದಲ್ಲಿ ಶರತ್ ಮತ್ತು ಮಧು ಇದ್ದರು. ಗಲಾಟೆ ನಡೆಯುತ್ತಿದ್ದಾಗ ಸ್ಥಳದಲ್ಲಿದ್ದ ಶರತ್ ಮತ್ತು ಮಧು ಗಲಾಟೆಯನ್ನು ತಪ್ಪಿಸಲು ಪ್ರಯತ್ನಿಸಿರಲಿಲ್ಲ, ಅವರು ದೂರದಲ್ಲಿ ನಿಂತು ಗಲಾಟೆಯನ್ನು ನೋಡಿಕೊಂಡು ಹೊರಟು ಹೋದರು. ನಿಪಿ.2 ದೂರಿನಲ್ಲಿ , ಶರತ್ ಮತ್ತು ಮಧು ಗಲಾಟೆಯನ್ನು ಕಣ್ಣಾರೆ ನೋಡಿದ್ದಾರೆ ಅಂತ ಹೇಳಿಲ್ಲ. ಶರತ್ ಮತ್ತು ಮಧು ಗಲಾಟೆಯನ್ನು ನೋಡಿ ಹೊರಟು ಹೋಗಿದ್ದರಿಂದ, ದೂರಿನಲ್ಲಿ ಗಲಾಟೆ ನಡೆಯುವಾಗ ಶರತ್ ಮತ್ತು ಮಧು ಇದ್ದರು ಅಂತ ಬರೆಸಲಿಲ್ಲ.

ದಿನಾಂಕ 04.06.2020 ರಂದು ರಾತ್ರಿ 10.30 ಗಂಟೆಯಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದಾಗ , ಆರೋಪಿ ಬಂದು ,ನಾನು ಕಾಯಿ ಕಿತ್ತುಕೊಳ್ಳುವುದಕ್ಕೆ ಹೋದೆ , ಆಗ ಚಾಸಾ.2 ಕಾಯಿ ಕಿತ್ತುಕೊಂಡು ನನಗೆ ಕೊಡಲಿಲ್ಲ, ಆದ್ದರಿಂದ ಚಾಸಾ.2 ರವರಿಗೆ ಒಂದು ಗತಿ ಕಾಣಿಸುತ್ತೇನೆ ಅಂತ ಆರೋಪಿ ಬಂದು ನನಗೆ ಹೇಳಿದಾಗ ಆ ವೇಳೆಯಲ್ಲಿ ಯಾರು ಇರಲಿಲ್ಲ, ನಾನು ಒಬ್ಬನೇ ಇದ್ದೆನು, ನಿಪಿ.2 ದೂರಿನಲ್ಲಿ ನಾನು " ದಿನಾಂಕ 04.06.2020 ರಂದು ರಾತ್ರಿ 10.30 ಗಂಟೆಯಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದಾಗ , ಆರೋಪಿ ಬಂದು ,ನಾನು ಕಾಯಿ ಕಿತ್ತುಕೊಳ್ಳುವುದಕ್ಕೆ ಹೋದೆ , ಆಗ ಚಾಸಾ.2 ಕಾಯಿ ಕಿತ್ತುಕೊಂಡು ನನಗೆ ಕೊಡಲಿಲ್ಲ, ಆದ್ದರಿಂದ ಚಾಸಾ.2 ರವರಿಗೆ ಒಂದು ಗತಿ ಕಾಣಿಸುತ್ತೇನೆ ಅಂತ ಆರೋಪಿ ಬಂದು ನನಗೆ ಹೇಳಿದಾಗ ಆ ವೇಳೆಯಲ್ಲಿ ಯಾರು ಇರಲಿಲ್ಲ, ನಾನು ಒಬ್ಬನೇ ಇದ್ದೆನು " ಅಂತ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ.2 ದೂರಿನಲ್ಲಿ ಮೇಲಿನ ರೀತಿಯಂತೆ ನಾನು ಬರೆಸಿಲ್ಲದೆ ಇದ್ದರೂ ಸಹಾ , ಬರಸಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.2 ರಕ್ತ ಸಂಬಂಧಿಸಿಗಳಲ್ಲ. ನಾನು ಮತ್ತು ಚಾಸಾ.2 ಒಂದೇ ಊರಿನವರು ಆಗಿರುವುದರಿಂದ ಪರಿಚಯಸ್ಥರಾಗಿದ್ದೇವೆ ಎಂದು ಹೇಳುತ್ತಾರೆ. ನಮ್ಮ ಊರಿಗೆ

ಒಬ್ಬರೇ ಯಜಮಾನರು ಇದ್ದಾರೆ. ನಮ್ಮ ಊರಿನಲ್ಲಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು ಇದ್ದಾರೆ. ನಮ್ಮ ಊರಿನಲ್ಲಿ ಯಾವುದೇ ಗಲಾಟೆ ನಡೆದರೂ ಅದನ್ನು ತೀರ್ಮಾನ ಮಾಡಲು ನಾನೇ ಹೋಗುತ್ತೇನೆ. ಚಾಸಾ.3 ಮತ್ತು ಆರೋಪಿಯ ತಂದೆ ನಡುವೆ ಆಸ್ತಿ ವಿಚಾರದಲ್ಲಿ ಗಲಾಟೆ ಆಗಿದ್ದಾಗ, ನಾನು ತೀರ್ಮಾನವನ್ನು ಮಾಡಿದ್ದೇನೆ, ಅವರು ನನ್ನ ಮಾತನ್ನು ಕೇಳಲಿಲ್ಲ, ನನ್ನ ನ್ಯಾಯವನ್ನು ಒಪ್ಪಲಿಲ್ಲ. ಬೇರೆ ಗ್ರಾಮಸ್ಥರ ಯಜಮಾನರನ್ನು ನಮ್ಮ ಗ್ರಾಮಕ್ಕೆ ಕರೆದುಕೊಂಡು ಬಂದು ನ್ಯಾಯಾ ಪಂಚಾಯಿತಿ ಮಾಡಿಸಿದ್ದರು. ಆರೋಪಿಯ ಮನೆಯವರು ನನ್ನ ನ್ಯಾಯಾವನ್ನು ಒಪ್ಪದೆ, ಬೇರೆ ಗ್ರಾಮಸ್ಥರ ಯಜಮಾನರನ್ನು ನಮ್ಮ ಗ್ರಾಮಕ್ಕೆ ಕರೆದುಕೊಂಡು ಬಂದು ನ್ಯಾಯಾ ಪಂಚಾಯಿತಿ ಮಾಡಿಸಿದ್ದರಿಂದ ನಮಗೆ ಆರೋಪಿ ಮತ್ತು ಅವರ ಕುಟುಂಬದ ಮೇಲೆ ದ್ವೇಷ ಬಂದಿತ್ತು ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲದೆ ಇದ್ದರೂ ಸಹಾ ಆರೋಪಿ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ನಿಪಿ.2 ದೂರಿನಲ್ಲಿ , ಆರೋಪಿಯ ಕೈಯಲ್ಲಿ ಉದ್ದ ಕುಡುಗೋಲು ಇತ್ತು ಅಂತ ಹೇಳಿದ್ದೇನೆ. ನಾನು ದೂರಿನಲ್ಲಿ ಆರೋಪಿಯ ಕೈಯಲ್ಲಿ ಉದ್ದ ಕುಡುಗೋಲು ಇತ್ತು ಅಂತ ಬರೆಸಿಲ್ಲ ಎಂದರೆ ಸರಿಯಲ್ಲ. ವ್ಯವಸಾಯಕ್ಕೆ ಬಳಸುವ ಕುಡುಗೋಲು ಬೇರೆ ಹಾಗೂ ಜವಳಿ ಕುಡುಗೋಲು ಬೇರೆ ಬೇರೆ ಎಂದರೆ ಸರಿ. ಕುಡುಗೋಲು ಚಿಕ್ಕದಾಗಿರುತ್ತದೆ ಹಾಗೂ ಜವಳಿ ಕುಡುಗೋಲು ದೊಡ್ಡದಾಗಿರುತ್ತದೆ ಎಂದರೆ ಸರಿ. ನಿಪಿ.2 ದೂರಿನಲ್ಲಿ ಆರೋಪಿ ಉದ್ದ ಕುಡುಗೋಲನ್ನು ಹಿಡಿದುಕೊಂಡಿದ್ದ ಎಲ್ಲೂ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ಈ ರೀತಿ ನಮೂದು ಆಗಿಲ್ಲದೆ ಇದ್ದರೂ ಸಹಾ , ನಮೂದು ಇದೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ದಿನಾಂಕ 04.06.2020 ರಂದು ನಮ್ಮ ಮನೆಗೆ ರಾತ್ರಿ ಬಂದಿರಲಿಲ ಎಂದರೆ ಸರಿಯಲ್ಲ. ಚಾಸಾ.2 ವಾಸ ಇದ್ದ ಮನೆಯ ಅಕ್ಕ ಪಕ್ಕದಲ್ಲಿ ನಮ್ಮ ಮನೆಗಿಂತಲೂ ಬೇರೆಯವರ ಮನೆಗಳು ಹತ್ತಿರದಲ್ಲಿ ಇತ್ತು . ನಮ್ಮ ಮನೆಯಿಂದ ಚಾಸಾ.2 ರವರ ಮನೆಯು 40 ರಿಂದ 50 ಅಡಿ ದೂರದಲ್ಲಿ ಇದೆ ಎಂದರೆ ಸಾಕ್ಷಿಯು 30 ಅಡಿ ದೂರ ಇದೆ ಎಂದು ಹೇಳುತ್ತಾರೆ. ಬೇರೆಯವರ ಮನೆಗಳು ಚಾಸಾ.2 ರವರ ಮನೆಯಿಂದ 5 ಅಡಿ ಹತ್ತಿರದಲ್ಲಿ ಇವೆ ಎಂದರೆ ಸರಿ. ಚಾಸಾ.2 ರವರಿಗೆ ನಾನು ಉಪಚರಿಸಿದೆನು, ಆಂಬ್ಯೂಲೆನ್ಸ್ ಗೆ ಫೋನ್ ಮಾಡಿದೆನು. ಚಾಸಾ.2 ರವರನ್ನು ಆಸ್ಪತ್ರೆಗೆ ಚಾಸಾ.7, ಚಾಸಾ.8, ಚಾಸಾ.9 ಹಾಗೂ ನಾನು ಕರೆದುಕೊಂಡು ಹೋಗಿದ್ದೆವು.

ದಿನಾಂಕ 04.06.2020 ರಂದು ಆರೋಪಿ ಚಾಸಾ.2 ಸತೀಶನಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮನೆಯಲ್ಲಿ ಮಲಗಿದ್ದೆನು ಎಂದರೆ ಸರಿಯಲ್ಲ. ಚಾಸಾ.2 ನಮ್ಮ ಮನೆಗೆ ಬಂದು ನಮ್ಮ ಮನೆಯ ಬಾಗಿಲ ಹತ್ತಿರ ಬಿದ್ದಿದ್ದನು, ರಕ್ತ ಹೋಗುತ್ತಿತ್ತು . ನಾನು

ಬಾಗಿಲನ್ನು ತೆರೆದಾಗ ಆ ಸಮಯದಲ್ಲಿ ಚಾಸಾ.2 ರವರನ್ನು ಬಿಟ್ಟು ಬೇರೆ ಯಾರನ್ನು ಅಲ್ಲಿ ನೋಡಲಿಲ್ಲ ಎಂದರೆ ಸರಿ. ಚಾಸಾ.2 ರವರೊಂದಿಗೆ ನಾನು ಆದಿಚುಂಚನಗಿರಿ ಆಸ್ಪತ್ರೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರನ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿಸಿ ಆಸ್ಪತ್ರೆಗೆ ಚಾಸಾ.2 ರವರೊಂದಿಗೆ ಹೋಗಿರಲಿಲ್ಲ ಎಂದರೆ ಸರಿ. ಆದಿಚುಂಚನಗಿರಿ ಆಸ್ಪತ್ರೆಯಿಂದ ಬೆಳ್ಳೂರು ಪೊಲೀಸ್ ಠಾಣೆಗೆ 3 ಕಿ.ಮಿ. ದೂರ ಇದೆ. ಘಟನೆ ನಡೆದ ದಿವಸವೇ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದೂರು ಕೊಡುವುದಕ್ಕೆ ನನಗೆ ತೊಂದರೆ ಇರಲಿಲ್ಲ.ಆರೋಪಿ ನಮ್ಮ ಮನೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ಕೈಯಲ್ಲಿ ಜವಳಿ ಕುಡುಗೋಲನ್ನು ಹಿಡಿದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಜವಳಿ ಕುಡುಗೋಲು ಇದೇ ಅನ್ನುವುದಕ್ಕೆ ನಾನು ಅದರ ಮೇಲೆ ಯಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿಲ್ಲ. ತೆಂಗಿನ ಮರ ಹೊಂದಿರುವ ರೈತರು , ಅವರ ಮನೆಗಳಲ್ಲಿ ತೆಂಗಿನ ಕಾಯಿಗಳನ್ನು ಕೀಳುವುದಕ್ಕೆ ಜವಳಿ ಕುಡುಗೋಲನ್ನು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ಆರೋಪಿ ಜವಳಿ ಕುಡುಗೋಲಿನಿಂದ ಚಾಸಾ.2 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಜವಳಿ ಕುಡುಗೋಲನ್ನು ಕೇಸಿಗೋಸ್ಕರ ನಾನು ಪೊಲೀಸರೊಂದಿಗೆ ಶರೀಕಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯು ಮು.ಮಾ.3 ಜವಳಿ ಕುಡುಗೋಲನ್ನು , ಚಾಸಾ.2 ಸತೀಶ ರವರ ಮನೆ ಹತ್ತಿರ ಬಿಸಾಡಿ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.3 ನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದೂರು ಕೊಟ್ಟಾಗ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದಾಗ ನಾನು ಜವಳಿ ಕುಡುಗೋಲನ್ನು ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಿಂದ ಜವಳಿ ಕುಡೂಗೋಲನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪೊಲೀಸರು ಕುಡುಗೋಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪೊಲೀಸರು ಕೃತ್ಯದ ಸ್ಥಳದಿಂದ ಸಾದಾ ಮಣ್ಣು, ರಕ್ತಸಿಕ್ತ ಮಣ್ಣನ್ನು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರು , ಅವರ ರಕ್ತಸಿಕ್ತವಾಗಿದ್ದ ಬಟ್ಟೆಯನ್ನು ನನ್ನ ಕೈಗೆ ಕೊಟ್ಟಿರಲಿಲ ಎಂದರೆ ಸರಿಯಲ್ಲ. ಈ ಬಟ್ಟೆಯನ್ನು ನಾನೇ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ಸ್ಥಳ ಮಹಜರ್ ನಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಮಹಜರನ್ನು ಬೆಳಗ್ಗೆ 10.30 ಗಂಟೆಯಿಂದ 12.30 ಗಂಟೆವರೆಗೆ ಸ್ಥಳದಲ್ಲಿ ಇದ್ದು ಮಹಜರ್ ಮಾಡಿದರು. ಸ್ಥಳ ಮಹಜರ್ ಸ್ಥಳದ ಚೆಕ್ಕು ಬಂದಿ ಗೊತ್ತು. ಪೂರ್ವಕ್ಕೆ - ಹುಣಸೇಮರ ಇದೆ, ಪಶ್ಚಿಮಕ್ಕೆ - ಕೆಂಪೇಗೌಡರ ಮನೆ , ಉತ್ತರಕ್ಕೆ - ರಾಮೇಗೌಡರ ಸೈಟು , ದಕ್ಷಿಣಕ್ಕೆ - ಶಂಕರಯ್ಯನ ಮನೆ. ನಾನು ಮೇಲೆ ಹೇಳಿದಂತೆ ಮಹಜರ್ ಸ್ಥಳದ ಚೆಕ್ಕು ಬಂದಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ಕೃತ್ಯದ ಸ್ಥಳಕ್ಕೆ ಬಂದು ಪರಿಶೀಲಿಸಿ ಸ್ಥಳದಲ್ಲಿ ಇದ್ದ ಮಣ್ಣು ಮತ್ತು ರಕ್ತಸಿಕ್ತ ಮಣ್ಣನ್ನು ತೆಗೆದುಕೊಂಡರು.

ನಿಪಿ.4 ರಿಂದ 9 ಫೋಟೋಗಳನ್ನು ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಘಟನೆಯಾದ 5 ದಿವಸಗಳ ಮೇಲೆ ಪೊಲೀಸರು ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಬಂದು ಫೋಟೋಗಳನ್ನು ತೆಗೆಸಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.8 ಮತ್ತು 9 ಫೋಟೋಗಳಲ್ಲಿ ಈಗ ನನಗೆ ತೋರಿಸಿದ ಇಬ್ಬರು ವ್ಯಕ್ತಿಗಳ ಹೆಸರುಗಳು ರಮೇಶ ಮತ್ತು ಭರತ್ . ನಿಪಿ.3 ಸ್ಥಳ ಮಹಜರ್ ಗೆ ಪೊಲೀಸರು ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.3 ಸ್ಥಳ ಮಹಜರ್ ಗೆ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.3 ಸ್ಥಳ ಮಹಜರ್ ಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯ ತಂದೆಯ ಮೇಲೆ ನನಗೆ ದ್ವೇಷ ಇರುವುದರಿಂದ, ಆರೋಪಿಯು ಯಾವುದೇ ತಪ್ಪನ್ನು ಮಾಡಿಲ್ಲದೆ ಇದ್ದರೂ ಸಹಾ , ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.